# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : ಮೇರಿ ಲೂಯಿ ಬರ್ಕ್
ಸಂಗ್ರಹಾನುವಾದ : ಸ್ವಾಮಿ ವೀರೇಶಾನಂದ

## ಭಾಗ ೨೦

### ಅಮೆರಿಕದ ದಕ್ಷಿಣದ ಒಂದು ನಗರದಲ್ಲಿ (ಮುಂದುವರಿದ ಭಾಗ)

ಸ್ವಾಮಿ ವಿವೇಕಾನಂದರು ಮೆಂಫಿಸ್ ಎಂಬ ನಗರದಲ್ಲಿ ಪ್ರವಚನಗಳನ್ನು ನೀಡುತ್ತಿದ್ದಾರೆ. ಜನವರಿ ೨೧, ೧೮೯೪ರಂದು ಅವರು 'ಭಾರತೀಯರ ರೀತಿನೀತಿಗಳು ಮತ್ತು ಕಟ್ಟುಪಾಡುಗಳು' ಎಂಬ ವಿಷಯವಾಗಿ ಮಾತನಾಡಿದರು. ಆಗ ಜಡಿಮಳೆ ಬೀಳುತ್ತಿದ್ದುದರಿಂದ ಅಷ್ಟೇನೂ ಸಭಿಕರು ಬರಲಿಲ್ಲ. ಅವರು ಅಂದು ಪ್ರತಿಪಾದಿಸಿದ ವಿಚಾರಗಳು ಕ್ರೈಸ್ತಧರ್ಮದ ಸಾಂಪ್ರದಾಯಿಕ ನಂಬಿಕೆಗಳಿಗೆ ವಿರುದ್ಧವಾಗಿದ್ದವು. ಹಾಗೆಂದು ಅವು ಕ್ರೈಸ್ತಧರ್ಮದ ಆಧ್ಯಾತ್ಮಿಕ ಚಿಂತನೆಗಳನ್ನೇನೂ ಅಲ್ಲಗಳೆಯಲಿಲ್ಲ. ಅವುಗಳಿಗೆ ಪೂರಕವಾಗಿದ್ದವು. ಹೀಗೆಂದು ವೃತ್ತಪತ್ರಿಕೆಗಳು ಬರೆದವು. ಇದಲ್ಲದೆ, ಹಿಂದೆ ಇಲ್ಲಿಗೆ ಬಂದಿದ್ದ ಯಾವುದೇ ಭಾಷಣಕಾರನಿಗಿಂತಲೂ ಸ್ವಾಮಿ ವಿವೇಕಾನಂದರು ಹೆಚ್ಚು ಪರಿಣಾಮ ಬೀರಿದರು ಎಂದೂ ಪತ್ರಿಕೆಗಳು ಹೊಗಳಿದವು.

ಅಂದಿನ ದಿನವೇ ಸ್ವಾಮೀಜಿ ಲಾ ಸಲೆಟ್ ಅಕಾಡೆಮಿ ಎನ್ನುವ ಸಂಸ್ಥೆಯಲ್ಲಿ ಆಸಕ್ತರೊಡನೆ ಮುಕ್ತ ಚರ್ಚೆಯನ್ನು ನಡೆಸಿದರು. ಈ ಸಂವಾದ ಸಭೆಯಲ್ಲಿ ಅವರು ಅಮೆರಿಕೆಯ ಭೌತಿಕವಾದವನ್ನು ಖಂಡಿಸಿದರು. ಹಾಗೆಯೇ ಭಾರತದ ಆವಶ್ಯಕತೆ ಧರ್ಮವಲ್ಲ ; ಹೀಗಾಗಿ ಕ್ರೈಸ್ತಪಾದ್ರಿಗಳು ಭಾರತೀಯರನ್ನು ತಮ್ಮ ಧರ್ಮಕ್ಕೆ ಪರಿವರ್ತಿಸುವ ಆವಶ್ಯಕತೆಯಿಲ್ಲ ಎಂದು ಪ್ರತಿಪಾದಿಸಿದರು. ತಾವು ಕ್ರೈಸ್ತಧರ್ಮದ ನಂಬಿಕೆಗಳನ್ನು ಮತ್ತು ಅದರ ಅನುಯಾಯಿಗಳನ್ನು ಅಪಾರವಾಗಿ ಗೌರವಿಸುವುದಾಗಿಯೂ ಅವರು ಹೇಳಿದರು. ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವಲ್ಲಿ , ಸ್ವಾಮೀಜಿ ಉದಾರತೆಯನ್ನು ತೋರಿದರು. ಎಲ್ಲ ಪ್ರಶ್ನೆಗಳಿಗೂ ವಿಸ್ತಾರವಾಗಿ ಸಮಂಜಸವಾದ ಉತ್ತರಗಳನ್ನು ನೀಡುತ್ತಿದ್ದರು. ಸ್ವಾಮೀಜಿ ಈ ಸಂಭಾಷಣೆಗಳಲ್ಲಿ ಆಧ್ಯಾತ್ಮಿಕ ಜೀವನದ ಆವಶ್ಯಕತೆಯನ್ನು ಎತ್ತಿಹೇಳಿದರು. ತಮ್ಮ ಧರ್ಮವು ಭೌತಿಕ ಪ್ರಗತಿಗಿಂತಲೂ ಆಧ್ಯಾತ್ಮಿಕ ಉನ್ನತಿಗೆ ಮಹತ್ವವನ್ನು ನೀಡುತ್ತದೆ ಎಂದು ಅವರು ತಿಳಿಸಿದರು.

ಸ್ವಾಮೀಜಿ ಮುಂದುವರಿದು ಹೇಳಿದರು: ''ಧಾರ್ಮಿಕ ಚಿಂತನೆಯನ್ನು ಮಾನವನ ಆಧ್ಯಾತ್ಮಿಕ ಆಯಾಮದ ಅಭಿವೃದ್ಧಿಗೆ ಬಳಸಿಕೊಳ್ಳಬೇಕು. ವಿಜ್ಞಾನ, ಕಲೆ ಮತ್ತು ತತ್ತ್ವಶಾಸ್ತ್ರಗಳಿಗೂ ಜೀವನದಲ್ಲಿ ತಮ್ಮದೇ ಆದ ಸ್ಥಾನವಿದೆ. ಆದರೆ ಇವುಗಳನ್ನು ಧರ್ಮದ ಜೊತೆಗೆ ಬೆರೆಸಿಕೊಂಡರೆ, ಆಧ್ಯಾತ್ಮಿಕತೆಯು ನಷ್ಟವಾಗುವುದು. ನೀವು, ಅಮೆರಿಕನ್ನರು, ಆರಾಧಿಸುವುದು ಏನನ್ನು ಗೊತ್ತೆ? ಡಾಲರನ್ನು (ಹಣವನ್ನು). ಧನಕ್ಕಾಗಿನ ಹುಚ್ಚು ಹುಡುಗಾಟದಲ್ಲಿ ನೀವು ಆಧ್ಯಾತ್ಮಿಕತೆಯನ್ನು ಮರೆತುಬಿಡುತ್ತೀರಿ; ಹೀಗೇ ಆದರೆ ನೀವೊಂದು ಭೌತಿಕತೆಯನ್ನು ನೆಚ್ಚಿಕೊಂಡ ರಾಷ್ಟ್ರವಾಗಿಬಿಡುತ್ತೀರಿ.''

ಜನವರಿ ೨೨, ೧೮೯೪ರಂದು ಸ್ವಾಮೀಜಿ ಮೆಂಫಿಸ್ ನಗರದಲ್ಲಿ ಇನ್ನೊಂದು ಪ್ರವಚನವನ್ನು ನೀಡಿದರು. ಇದು ಯಂಗ್ ಹಿಬ್ರೂ ಮೆನ್ಸ್ ಅಸೋಸಿಯೇಷನ್ ಹಾಲ್‌ನಲ್ಲಿ ಏರ್ಪಾಡಾಗಿತ್ತು. ಇಲ್ಲಿ ಅವರು 'ಧರ್ಮಶಾಸ್ತ್ರಗಳ ತುಲನಾತ್ಮಕ ಅಧ್ಯಯನ' ಎಂಬ ವಿಷಯವಾಗಿ ಭಾಷಣ ಮಾಡಿದರು. ಮೆಂಫಿಸ್ ನಗರದ ಬೌದ್ಧಿಕ ವರ್ಗ ಅಲ್ಲಿ ನೆರೆದಿತ್ತು. ಇದು ಮೆಂಫಿಸ್ ನಗರದಲ್ಲಿ ಸ್ವಾಮಿ ವಿವೇಕಾನಂದರು ನೀಡಿದ ಕಟ್ಟಕಡೆಯ ಭಾಷಣವಾಗಿತ್ತು.

ಮೆಂಫಿಸ್ ನಗರದ ಜನತೆ ಸ್ವಾಮೀಜಿಯವರನ್ನು ರಾಜಮರ್ಯಾದೆಯಿಂದ ಬರಮಾಡಿಕೊಂಡರು. ಅವರೆಲ್ಲ ಸ್ವಾಮೀಜಿಯವರ ಪ್ರವಚನಗಳಿಗೆ ಬಹುಸಂಖ್ಯೆಯಲ್ಲಿ ಬರುತ್ತಿದ್ದರು; ಸ್ವಾಮೀಜಿಯವರಿಗೆ ಉನ್ನತ ಮನ್ನಣೆಯನ್ನು ಕೊಟ್ಟರಷ್ಟೇ ಅಲ್ಲ, ಅವರನ್ನು ಹೃತ್ಪೂರ್ವಕವಾಗಿ ಪ್ರೀತಿಸಿದರು. ಸ್ವಾಮೀಜಿಯವರು ಮೆಂಫಿಸ್ ನಗರದಿಂದ ತೆರಳುವ ದಿನ, ಶ್ರೀ ಕಾನರ್ ಎಂಬ ಪ್ರತಿಷ್ಠಿತ ವ್ಯಕ್ತಿಯು ಅವರಿಗೆ ಗೌರವದ ಬೀಳ್ಕೊಡಯಗೆಯನ್ನು ನೀಡಿದನು.

ಸ್ವಾಮೀಜಿ ಮೆಂಫಿಸ್ ನಗರದಿಂದ ಮತ್ತೆ ಚಿಕಾಗೋ ನಗರಕ್ಕೆ ಜನವರಿ ೨೨, ೧೮೯೪ರಂದು ತೆರಳಿದರು. ಸ್ವಾಮೀಜಿ ಆ ದಕ್ಷಿಣದ ನಗರದಲ್ಲಿ ಒಂದು ವಾರಕ್ಕೂ ಹೆಚ್ಚು ಕಾಲವನ್ನು ಕಳೆದರು. ನೂರಾರು ಜನ ಈ ಸಮಯದಲ್ಲಿ ಅವರ ಸಂಪರ್ಕಕ್ಕೆ ಬಂದರು. ಅವರ ಉಪನ್ಯಾಸಗಳಿಂದ ಪ್ರಭಾವಿತರಾದರು. ಆಧ್ಯಾತ್ಮಿಕ ಪೋಷಣೆಯನ್ನು ಪಡೆದುಕೊಂಡರು.

ಸ್ವಾಮೀಜಿಯವರ ಪ್ರವಚನ ಪ್ರವಾಸಗಳು ಅಮೆರಿಕೆಯ ಜನತೆಯ ಮೇಲೆ ಬೀರಿದ ಒಟ್ಟು ಪ್ರಭಾವ ಹೇಗಿತ್ತು? ಮೆರ್ವಿನ್ ಮೇರಿ ಸ್ನೆಲ್ ಎನ್ನುವವನು ಜನವರಿ ೧೮೯೪ರ ಕಡೆಯ ಭಾಗದಲ್ಲಿ ಬರೆದ ದೀರ್ಘವಾದ ಪತ್ರವೊಂದು ಇಂಡಿಯನ್ ಮಿರರ್ ಪತ್ರಿಕೆಯ ಮಾರ್ಚ್ ೯, ೧೮೯೪ರ ಸಂಚಿಕೆಯಲ್ಲಿ ಪ್ರಕಟವಾಯಿತು. ಆತನು ಸರ್ವಧರ್ಮ ಸಮ್ಮೇಳನದ ಸಮಿತಿಯ ಅಧ್ಯಕ್ಷರ ಸಹಾಯಕನಾಗಿದ್ದರು. ಸ್ವಾಮೀಜಿಯವರ ಪ್ರವಚನ

ಪ್ರವಾಸಗಳನ್ನು ಗಮನಿಸುತ್ತಿದ್ದನು. ಅದರಲ್ಲಿ ಅವನು ಹೀಗೆ ಬರೆದಿದ್ದಾನೆ:

''ಸರ್ವಧರ್ಮ ಸಮ್ಮೇಳನವಾದಾಗಿನಿಂದ ಸ್ವಾಮಿ ವಿವೇಕಾನಂದರು ಅಮೆರಿಕದ ಪ್ರಮುಖ ನಗರಗಳಲ್ಲಿ ಅಪಾರ ಸಂಖ್ಯೆಯ ಸಭಿಕರ ಮುಂದೆ ಭಾಷಣಮಾಲೆಯನ್ನು ಕೈಗೊಂಡಿದ್ದಾರೆ. ಎಲ್ಲ ಕಡೆಯೂ ಹಾರ್ದಿಕ ಸುಸ್ವಾಗತವು ಅವರಿಗೆ ದೊರಕಿತು. ಅವರು ಅನೇಕ ಕ್ರೈಸ್ತ ಚರ್ಚುಗಳಲ್ಲಿ ಪ್ರವಚನವನ್ನು ಮಾಡಿದರು. ಅಲ್ಲೆಲ್ಲ ಅಪಾರ ಮೆಚ್ಚುಗೆಯನ್ನು ಪಡೆದರು. ಸಂಪ್ರದಾಯಸ್ಥ ಕ್ರೈಸ್ತರು ಕೂಡ 'ಇವರು ಮಾನವರಲ್ಲೆಲ್ಲ ರಾಜನಂತೆ ಇದ್ದಾರೆ.' ಎಂದು ಉದ್ಗರಿಸಿದ್ದಾರೆ. 'ಸ್ವಾಮಿ ವಿವೇಕಾನಂದರು ಒಬ್ಬ ಅಪೂರ್ವ ವ್ಯಕ್ತಿ; ಅವರಂಥ ಹಿಂದೂ ವ್ಯಕ್ತಿ ಬೇರೆ ಕಾಣ ಸಿಗುವುದಿಲ್ಲ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

''ಪರಮಹಂಸ ಸಂನ್ಯಾಸಿಗಳಾದ ಸ್ವಾಮಿ ವಿವೇಕಾನಂದರು ಇಷ್ಟೊಂದು ಮೆಚ್ಚಿಗೆಯನ್ನು ಪಡೆದಿರುವುದು ಆಶ್ಚರ್ಯವೇನೂ ಇಲ್ಲ! ಅಮೆರಿಕೆಯ ಜನರು ಆಧ್ಯಾತ್ಮಿಕ ಸತ್ಯಗಳಿಗಾಗಿ ಹಾತೊರೆಯುತ್ತಿದ್ದಾರೆ ಎನ್ನುವುದು ಇದು ಎತ್ತಿತೋರಿಸುತ್ತದೆ. ಸ್ವಾಮಿ ವಿವೇಕಾನಂದರು ಈ ಆವಶ್ಯಕತೆಯನ್ನು ಪೂರೈಸುತ್ತಿದ್ದಾರೆ.''

ಇದುವರೆಗೆ ಅಮೆರಿಕೆಯ ಮಧ್ಯಪಾಶ್ಚಾತ್ಯ ಮತ್ತು ದಕ್ಷಿಣ ಪ್ರದೇಶಗಳ ನಗರಗಳಲ್ಲಿ ಸ್ವಾಮೀಜಿ ಪ್ರವಚನ ಪ್ರವಾಸವನ್ನು ಕೈಗೊಂಡಿರುವುದನ್ನು ನಾವು ನೋಡಿದೆವು. ಹಾಗೆಯೇ ಅವರನ್ನು ಅಲ್ಲಿನ ಜನರು ಹೇಗೆ ಹಾರ್ದಿಕವಾಗಿ ಬರಮಾಡಿಕೊಂಡರು ಎನ್ನುವುದನ್ನೂ ಕಂಡುಕೊಂಡೆವು. ಆದರೆ, ಆ ಸಮಯದಲ್ಲಿ ಸ್ವಾಮೀಜಿ ಅನುಭವಿಸಬೇಕಾಗಿ ಬಂದ ಮಾನಸಿಕ ಮತ್ತು ದೈಹಿಕ ಕಷ್ಟಗಳಿಗೆ ಎಣೆಯೇ ಇರಲಿಲ್ಲ ಎಂಬುದನ್ನೂ ನಾವು ಅರಿತಿರಬೇಕು.

ಹಲವಾರು ತಿಂಗಳುಗಳ ಕಾಲ, ಅವುಗಳಲ್ಲಿ ಬಹುತೇಕ ವಿಪರೀತ ಚಳಿಗಾಲದ ಮಧ್ಯಕಾಲದಲ್ಲಿ , ಸ್ವಾಮೀಜಿ ಎಡೆಬಿಡದೆ ಪ್ರವಾಸ ಮಾಡಿದರು. ಅವರು ೧೮೯೩ರ ಅಕ್ಟೋಬರ್ ಪೂರ್ತಿ ಮತ್ತು ನವೆಂಬರ್ ತಿಂಗಳ ಮೊದಲ ಮೂರು ವಾರಗಳನ್ನು ಶಿಕಾಗೋ ನಗರದಲ್ಲಿಯೇ ಕಳೆದರು. ನವೆಂಬರ್ ಅಂತಿಮ ಭಾಗದಲ್ಲಿ ಕುಖ್ಯಾತ ಲೆಕ್ಚರ್ ಬ್ಯೂರೋವಿನ ಆಶ್ರಯದಲ್ಲಿ ಪ್ರವಚನಗಳನ್ನು ಮಾಡಲು ಬಿಡುವಿಲ್ಲದೆ ಸುತ್ತಾಡಿದರು. ಬಹಳ ಪ್ರಯಾಸಪಟ್ಟರು. ಈ ಪ್ರವಚನ ಸರಣಿಯಲ್ಲಿ ಅವರು ಪ್ರವಾಸ ಮಾಡಿದ ಕೆಲವು ನಗರಗಳೆಂದರೆ ಮ್ಯಾಡಿಸನ್, ಮಿನ್ನಿಯಾಪೊಲಿಸ್ ಮತ್ತು ಡೆ ಮೊಯ್ನಿಸ್ ಈ ಮೂರು ನಗರಗಳನ್ನು ಕೇವಲ ಒಂದು ವಾರದಷ್ಟು ಸಂಕ್ಷಿಪ್ತ ಕಾಲಮಾನದಲ್ಲಿ ಅವರು ಕ್ರಮಿಸಿದರು.

ಅನಂತರ, ಸುಮಾರು ಆರು ವಾರಗಳ ಕಾಲ ಸ್ವಾಮೀಜಿ ಎಲ್ಲಿದ್ದರು ಎನ್ನುವುದು ನಮಗೆ ತಿಳಿಯಬರುವುದಿಲ್ಲ. ಡಿಸೆಂಬರ್ ೧೮೯೩ರ ಒಂದು ದಿನದ ವೃತ್ತಾಂತ ಮಾತ್ರ ನಮಗೆ ಇದುವರೆಗೆ ಗೊತ್ತಾಗಿದೆ. ಅಂದು ಅವರು ಮಿನ್ನಿಯಾಪೊಲಿಸ್ ನಗರಕ್ಕೆ ಹಿಂದಿರುಗಿ ಬಂದಿದ್ದರು. ಮಿಕ್ಕ ಸಂದರ್ಭದಲ್ಲಿ ಅವರು ಇದ್ದ ಸ್ಥಳಗಳ ಬಗ್ಗೆ ನಾವು ಊಹೆಯನ್ನಷ್ಟೇ ಮಾಡಬಹುದು. ಅದಕ್ಕಾಗಿನ ಪುರಾವೆಗಳು ಅವರ ಪತ್ರಗಳಲ್ಲಿಯೇ ನಮಗೆ ದೊರಕುತ್ತವೆ. ಅವರು ಖಂಡಿತ ಬಹುದೂರದ ಪಟ್ಟಣಗಳಿಗೆ ಪ್ರಯಾಣ ಮಾಡಿದ್ದರು. ತಮ್ಮ ಸಂನ್ಯಾಸಿ ಸೋದರ ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಕಾಗದಲ್ಲಿ ಸ್ವಾಮೀಜಿ ಹೀಗೆ ಬರೆಯುತ್ತಾರೆ:

''ಕಾರ್ಯದ ಒತ್ತಡವು ನನ್ನನ್ನು ಒಂದು ದಿನ ಕೆನಡಾ ದೇಶದ ಗಡಿಪ್ರದೇಶದ ನಗರವೊಂದಕ್ಕೆ ಪ್ರಯಾಣಮಾಡುವಂತೆ ಮಾಡುತ್ತದೆ; ಮತ್ತು ಮರುದಿನವೇ ಅಮೆರಿಕದ ದಕ್ಷಿಣ ಪ್ರದೇಶದ ನಗರವೊಂದರಲ್ಲಿ ಪ್ರವಚನ ನೀಡುವಂತೆ ಬಲಾತ್ಕರಿಸುತ್ತದೆ.''

ಮೇಲಿನ ಮಾಹಿತಿಯು ಸ್ವಾಮೀಜಿ ಪ್ರಯಾಣಮಾಡಿದ ನಗರಗಳ ಮತ್ತು ಕಾಲದ ನಿಖರ ಮಾಹಿತಿಯನ್ನು ನಮಗೆ ನೀಡದೇ ಇರಬಹುದು. ಆದರೆ. ಅವರ ಪ್ರಯಾಣದ ವಿಸ್ತೀರ್ಣವನ್ನು ಮತ್ತು ಪ್ರಯಾಣದ ಕಷ್ಟಸಾಧ್ಯತೆಯನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ಈ ಕಾಲದಲ್ಲಿ ಸ್ವಾಮೀಜಿ ಪಡುತ್ತಿದ್ದ ಕಡುಕಷ್ಟದ ಅಲ್ಪನೋಟವನ್ನು ನಾವು ಭಗಿನಿ ಕ್ರಿಸ್ಟೀನ್ ಬರೆದಿರುವ ನೆನಪುಗಳ ಮೂಲಕ ತಿಳಿದುಕೊಳ್ಳಬಹುದು. ಅದರಲ್ಲಿ ಸ್ವಾಮೀಜಿ ಕೈಗೊಳ್ಳುತ್ತಿದ್ದ ಪ್ರವಾಸದ ಬಗ್ಗೆ ಆಕೆ ಹೀಗೆ ಬರೆಯುತ್ತಾರೆ:

''ಅಲ್ಲಿನ ಪದ್ಧತಿಯಂತೆ, ಪ್ರತಿಯೊಂದು ಹೊಸ ಸ್ಥಳದಲ್ಲಿರುವ ಸಮಿತಿಗೆ ಹಲವಾರು ಪ್ರವಚನಗಳನ್ನು ಆಯೋಜಿಸುವ ಆಯ್ಕೆಯನ್ನು ನೀಡಲಾಗಿತ್ತು. ಅವುಗಳ ಸಂಭಾವ್ಯ ವಿಷಯಗಳು ಹೀಗಿದ್ದವು: 'ಮಾನವನ ದಿವ್ಯತೆ', 'ಭಾರತದ ರೀತಿನೀತಿಗಳು ಮತ್ತು ಕಟ್ಟುಪಾಡುಗಳು', 'ಭಾರತದ ಮಹಿಳೆಯರು', 'ನಮ್ಮ ಪರಂಪರೆ'. ಆದರೆ, ಎಲ್ಲಿ ಬೌದ್ಧಿಕ ವರ್ಗದ ಜನರು ಇರುವುದಿಲ್ಲವೋ, ಅಂಥ ಕೆಲವು ಗಣಿಪ್ರದೇಶದ ನಗರಗಳಲ್ಲಿ , ಬಹಳ ಕಷ್ಟವಾದ ವಿಷಯಗಳನ್ನು ಪ್ರವಚನ ಬ್ಯೂರೋ ನೀಡುತ್ತಿತ್ತು. ಸ್ವಾಮೀಜಿ ತಮ್ಮ ಕಷ್ಟವನ್ನು ಹೀಗೆ ತೋಡಿಕೊಳ್ಳುತ್ತಿದ್ದರು: 'ಅಂಥ ಸಂದರ್ಭಗಳಲ್ಲಿ ಸಭಿಕರಿಂದ ಒಂದು ಎಳೆಯಷ್ಟೂ ಬುದ್ಧಿವಂತಿಕೆಯ ಪ್ರತಿಕ್ರಿಯೆಯು ಕಾಣಬರುತ್ತಿರಲಿಲ್ಲ.' ಎಂದು.''

ಲೆಕ್ಚರ್ ಬ್ಯುರೋ ಸ್ವಾಮೀಜಿಯವರನ್ನು ಒಂದು ಸರ್ಕಸ್ಸಿನ ಬೊಂಬೆಯಂತೆ ನಡೆಸಿಕೊಂಡಿತು. ಸಾಮಾನ್ಯ ಮನುಷ್ಯನಿಗೆ ಅಸಾಧ್ಯವಾದಷ್ಟು ಪ್ರವಚನಗಳನ್ನು ಏರ್ಪಡಿಸಿತು. ಅದಕ್ಕೆ ಮೇಲೆ ಅಮೆರಿಕಾದಾದ್ಯಂತ ಸುದೀರ್ಘಕಾಲದ ಪ್ರಯಾಣ

ಬೇರೆ! ಇದಕ್ಕೆ ಸೇರಿದಂತೆ ಅಮೆರಿಕೆಯಲ್ಲಿ ಚಳಿಗಾಲದಲ್ಲಿ ಕಂಡು ಬರುವ ಅಸಾಧ್ಯ ಕೊರೆಯುವ ಚಳಿ! ಇದಲ್ಲದೆ ಸ್ವಾಮೀಜಿ ತಮ್ಮ ಪ್ರವಚನಗಳ ಸಂಖ್ಯೆ ಮತ್ತು ಹಣದ ಲೆಕ್ಕವನ್ನು ಬೇರೆ ಇಟ್ಟು ಕೊಳ್ಳಬೇಕಾಗಿತ್ತು! ಲೆಕ್ಚರ್ ಬ್ಯುರೋ ಹಣದ ವಿಷಯದಲ್ಲಿ ಸ್ವಾಮೀಜಿಯವರಿಗೆ ನಂಬಲಾರದ ಮೋಸವನ್ನು ಮಾಡಿದ್ದನ್ನು ಮುಂದೆ ನೋಡುತ್ತೇವೆ. ಇಷ್ಟಕ್ಕೂ ಮೇಲೆ ಸಣ್ಣ ಸಣ್ಣ ನಗರಗಳ ಅಶಿಕ್ಷಿತ ಸಭಿಕರಿಗೆ ಸ್ವಾಮೀಜಿಯವರು ಪ್ರತಿಪಾದಿಸುತ್ತಿದ್ದಂತಹ ತಾತ್ವಿಕ ವಿಚಾರಗಳು ಅರ್ಥವಾಗುತ್ತಿರಲಿಲ್ಲ. ಅವರೆಲ್ಲ ಕಲ್ಲಿನಂತೆ ಯಾವ ಸಂವೇದನೆಯಿಲ್ಲದ ಮುಖವನ್ನು ಮಾಡಿಕೊಂಡು ಕುಳಿತಿರುತ್ತಿದ್ದರು. ಇಷ್ಟೂ ಅಲ್ಲದೆ ಸ್ವಾಮೀಜಿ, 'ಮಾನವನ ದಿವ್ಯತೆ' ಯಂಥ ಆಧ್ಯಾತ್ಮಿಕ ಪ್ರವಚನವನ್ನು ಮಾಡಿಮುಗಿಸಿದ ಮೇಲೆ, 'ಭಾರತದಲ್ಲಿ ತಾಯಂದಿರು ಮಕ್ಕಳನ್ನು ಮೊಸಳೆಗಳಿಗೆ ಹಾಕುತ್ತಾರೇನು?' ಎನ್ನುವ ಅಸಂಬದ್ಧ ಪ್ರಶ್ನೆಗಳನ್ನು ಸಭಿಕರಿಂದ ಎದುರಿಸಬೇಕಾಗಿತ್ತು.

ದೊಡ್ಡ ದೊಡ್ಡ ನಗರಗಳಲ್ಲಿ ಬುದ್ಧಿವಂತ ಸಭಿಕರು ಸ್ವಾಮೀಜಿಯವರ ವಿದ್ವತ್ತು ಮತ್ತು ವಾಕ್ಚಾತುರ್ಯವನ್ನು ಮೆಚ್ಚಿಕೊಳ್ಳುತ್ತಿದ್ದರು. ಧಾರ್ಮಿಕ ಮತಾಂಧತೆ ಅಷ್ಟೊಂದು ಅಲ್ಲಿ ಕಾಣಬರುತ್ತಿರಲಿಲ್ಲ. ಆದರೆ ಅಲ್ಲಿಯೂ ಹಲವಾರು ಪ್ರವಚನಗಳು ಏರ್ಪಾಡಾಗಿರುತ್ತಿದ್ದವು. ಹೀಗಾಗಿ ಕಾರ್ಯಕ್ರಮಗಳ ಒತ್ತಡ ಇದ್ದೇ ಇರುತ್ತಿತ್ತು. ಸ್ವಾಮೀಜಿ ಅತಿಮಾನುಷ ಶಕ್ತಿಯಿಂದ ಕಷ್ಟಪಟ್ಟು ಶ್ರಮಿಸಬೇಕಾಗಿತ್ತು. ೧೮೮೦ ರಲ್ಲಿ ಮ್ಯಾಕ್ಸ್ ಓ ರೆಲ್ ಎಂಬ ಪ್ರವಚನಕಾರನು ಇದೇ ರೀತಿ ಪ್ರವಾಸವನ್ನು ಮಧ್ಯ ಪಾಶ್ಚಾತ್ಯ ಪ್ರಾಂತಗಳಲ್ಲಿ ಕೊರೆಯುವ ಚಳಿಗಾಲದಲ್ಲಿ ಕೈಗೊಂಡನು. ಅವನ ಪ್ರವಾಸವನ್ನು ಕೂಡ ಒಂದು ಲೆಕ್ಚರ್ ಬ್ಯೂರೋ ಆಯೋಜಿಸಿತ್ತು. ಅವನು ತನ್ನ ಪ್ರವಾಸದ ಬಗ್ಗೆ ಒಟ್ಟಾರೆಯಾಗಿ ಹೀಗೆ ಬರೆಯುತ್ತಾನೆ. ಪ್ರಾಯಶಃ ಸ್ವಾಮೀಜಿಯವರು ಎದುರಿಸಿದ ಪರಿಸ್ಥಿತಿಯು ಕೂಡ ಹಾಗೇ ಇದ್ದಿರಬೇಕು:

''ಇಂಥ ಕೆಲಸವನ್ನು ಕೈಗೊಳ್ಳುವುದು ಜೀವನದ ಸುಖಸೌಲಭ್ಯಗಳನ್ನು ಅನುಭವಿಸಿರುವ ಒಬ್ಬ ಮನುಷ್ಯನಿಗೆ ಬಹಳ ಕಷ್ಟಸಾಧ್ಯವೇ ಸರಿ! ನಟರು, ತಮ್ಮೆಲ್ಲ ಕಾರ್ಯಕ್ರಮಗಳಲ್ಲಿಯೂ, ತಾವು ಹೋಗುವ ನಗರದಲ್ಲಿ ಒಂದು ವಾರದ ತನಕ ಉಳಿದುಕೊಳ್ಳುತ್ತಾರೆ, ಕೆಲವೊಮ್ಮೆ ೧೫ ದಿನಗಳ ಕಾಲ ಕೂಡ. ಆದರೆ ಒಬ್ಬ ಭಾಷಣಕಾರನು ಪ್ರತಿದಿನವೂ ಪ್ರಯಾಣಮಾಡುತ್ತಲೇ ಇರಬೇಕಾಗುತ್ತದೆ! ಒಮ್ಮೊಮ್ಮೆ ರಾತ್ರಿಯ ಪ್ರಯಾಣ ಇಲ್ಲದಿದ್ದರೆ ಮಾತ್ರ ಅವನಿಗೆ ಸಂತೋಷ! ಈ ಪ್ರಯಾಣಗಳ ಏಕತಾನತೆಯನ್ನು ಯಾವ ಪದಗಳಿಂದಲೂ ಚಿತ್ರಿಸಲು ಸಾಧ್ಯವೇ ಇಲ್ಲ. ಏಕತಾನತೆಯು ಈ ಸಂದರ್ಭದಲ್ಲಿ ಸಹಿಸಲು ಅಸಾಧ್ಯವಾಗುತ್ತದೆ.''

ಸ್ವಾಮೀಜಿ ಒಬ್ಬ ಸಂನ್ಯಾಸಿಗಳು. ಅವರೇನೂ ಜೀವನದ ಸುಖಸೌಲಭ್ಯಗಳನ್ನು ಅನುಭವಿಸಿದವರಲ್ಲ. ಆದರೆ ಗಾಢವಾದ ಧ್ಯಾನಜೀವನವನ್ನೇ ಅಭ್ಯಾಸಮಾಡಿಕೊಂಡಿದ್ದ ಸ್ವಾಮೀಜಿಗೆ ಈ ಬಗೆಯ ಎಡೆಬಿಡದ, ತವಕದ ಪ್ರಯಾಣವು ಕಡುಕಷ್ಟವನ್ನು ನೀಡಿತು ಎಂಬುದನ್ನು ನಾವು ಮರೆಯಬಾರದು.

ಆದರೆ ಇಂಥ ಬರಡು ಪ್ರಯಾಣದಲ್ಲಿಯೂ ಒಂದು ಬೆಳಕಿನ ಕಿರಣವೊಂದಿತ್ತು. ಅಮೆರಿಕದ ಮಧ್ಯಪಾಶ್ಚಾತ್ಯ ರಾಜ್ಯಗಳು ಆಧ್ಯಾತ್ಮಿಕವಾಗಿ ಬರಡು ಪ್ರದೇಶಗಳೇನೂ ಆಗಿರಲಿಲ್ಲ! ಅಲ್ಲಿನ ಜನರು ಸ್ವಾಮೀಜಿಯವರನ್ನು ಮತ್ತು ಅವರ ಚಿಂತನೆಗಳನ್ನು ಮುಕ್ತಮನಸ್ಸಿನಿಂದ ಮತ್ತು ಹೃದಯಪೂರ್ವಕವಾಗಿ ಬರಮಾಡಿಕೊಂಡರು. ಇದಲ್ಲದೆ, ಅವರ ಚಿಂತನೆಗಳನ್ನು ಅರ್ಥಮಾಡಿಕೊಂಡರು. ಅಂಥ ವಿರಳ ಪ್ರಬುದ್ಧ ಜನರನ್ನು ಕಂಡಾಗ ಸ್ವಾಮೀಜಿಯವರು ಸಂತೋಷಪಡುತ್ತಿದ್ದರು. ಹೇಲ್ ಸಹೋದರಿಯರಲ್ಲಿ ಒಬ್ಬಾಕೆಗೆ ಈ ಬಗೆಯ ಅಪರೂಪದ ಸಂದರ್ಭವನ್ನು ಸ್ವಾಮೀಜಿ ತಮ್ಮ ಕಾಗದದಲ್ಲಿ ವಿವರಿಸಿ ಹೇಳುತ್ತಾರೆ. ಈ ಪತ್ರವು ಅಮೂಲ್ಯವಾದುದು. ಏಕೆಂದರೆ, ಸ್ವಾಮೀಜಿ ಅಮೆರಿಕದಲ್ಲಿನ ತಮ್ಮ ಅನುಭವಗಳ ಬಗ್ಗೆ ಭಾರತದ ತಮ್ಮ ಅನುಯಾಯಿಗಳಿಗೆ ಪತ್ರದಲ್ಲಿ ವಿವರ ಕೊಡುತ್ತಿದ್ದುದು ಬಹಳ ವಿರಳವೇ ಸರಿ. ಇಲ್ಲಿ ಸ್ವಾಮೀಜಿಯವರ ಅಮೆರಿಕದ ಪರಿವ್ರಾಜಕ ಜೀವನದ ಮಿಂಚುನೋಟಗಳನ್ನು ನಾವು ಪಡೆದುಕೊಳ್ಳುತ್ತೇವೆ:

''... ಇಲ್ಲೊಬ್ಬ ಚೆಲುವಾದ ಯುವತಿ ಇರುವಳು. ನಾನು ಅವಳನ್ನು ಎರಡು ಬಾರಿ ನೋಡಿದೆ. ಆದರೆ ಅವಳ ಹೆಸರು ನನಗೆ ಜ್ಞಾಪಕವಿಲ್ಲ. ಅವಳು ಎಷ್ಟು ಬುದ್ಧಿವಂತಳು, ಸುಂದರಿ, ಆಧ್ಯಾತ್ಮಿಕ ಪ್ರವೃತ್ತಿಯುಳ್ಳವಳು; ಈ ಲೋಕಕ್ಕೆ ಸೇರಿದವಳಲ್ಲ ಅವಳು. ದೇವರು ಅವಳನ್ನು ಆಶೀರ್ವದಿಸಲಿ. ಆಕೆ ಇವತ್ತು ಶ್ರೀಮತಿ ಮ್ಯಾಗ್ಡೊಗಲ್ ಅವರೊಡನೆ ಬಂದು, ಆಧ್ಯಾತ್ಮಿಕ ವಿಷಯದ ಬಗ್ಗೆ ಅಷ್ಟೊಂದು ಆಸಕ್ತಿಯಿಂದ ಮಾತನಾಡಿದಳು. ನನಗೆ ಇದನ್ನು ಕೇಳಿ ಆಶ್ಚರ್ಯವಾಯಿತು. ಅವಳಿಗೆ ಯೋಗಿಗಳ ವಿಷಯದಲ್ಲಿ ಎಲ್ಲಾ ಗೊತ್ತಿದೆ. ಅವಳೇ ಸಾಧನೆಯಲ್ಲಿ ಬಹಳ ಮುಂದುವರಿದು ಹೋಗಿದ್ದಾಳೆ!

''ಭಗವಂತ ಹೇಗೆ ಕೆಲಸ ಮಾಡುವನು ಎಂಬುದನ್ನು ನಾವು ತಿಳಿದುಕೊಳ್ಳಲಾರೆವು. ದೇವರು ಅವಳನ್ನು ಆಶೀರ್ವದಿಸಲಿ. ಅವಳು ಅಷ್ಟು ಸರಳ ಸ್ವಭಾವದವಳು ಮತ್ತು ಶುದ್ಧಾತ್ಮಗಳೂ ಆಗಿರುವಳು. ತುಂಬ ಕಷ್ಟದಿಂದ ಕೂಡಿದ, ದುಃಖಮಯವಾದ ನನ್ನ ಜೀವನದಲ್ಲಿ ನನಗೆ ಸಿಗುವ ಒಂದು ಅಪೂರ್ವವಾದ ಆನಂದವೇ ಆಗಿಂದಾಗ್ಗೆ ನಿಮ್ಮಂತಹ ಪವಿತ್ರರಾದ, ಆನಂದದಿಂದ ಕೂಡಿದ ವ್ಯಕ್ತಿಗಳ ದರ್ಶನ. ಬೌದ್ಧರ ಒಂದು ಶ್ರೇಷ್ಠ ಪ್ರಾರ್ಥನೆಯೇ, 'ಪ್ರಪಂಚದಲ್ಲಿರುವ ಪವಿತ್ರಾತ್ಮರಿಗೆಲ್ಲ ನಾನು ನಮಸ್ಕರಿಸುವೆ' ಎನ್ನುವುದು.''

*(ಮುಂದುವರಿಯುವುದು)*